# ಅಮೆರಿಕ ಪ್ರಗತಿಯಲ್ಲಿ ಅನಿವಾಸಿ ಭಾರತೀಯರ ಕೊಡುಗೆ ಅಪಾರ

▪ **ವೆಂಕಟೇಶ್ ರಾಘವೇಂದ್ರ**

**ಅಮೋಘವರ್ಷ ಮಂಟಪ, ಅಕ್ಕ ಸಮ್ಮೇಳನ, ಅಟ್ಲಾಂಟ, ಅಮೆರಿಕ:**

ಅಕ್ಕ ಸಮ್ಮೇಳನದ ಎರಡನೆ ಜನಪ್ರವಾಹ ಬೆಳೆಯುತ್ತಾ ಹೋಗಿದೆ. ಶನಿವಾರ ಬೆಳಗ್ಗೆ ಅಟ್ಲಾಂಟದ ಎಳೆ ಬಿಸಿಲಿನಲ್ಲಿ ನಡೆದ ಮೆರವಣಿಗೆಯಲ್ಲಿ ಸುಮಾರು 3000 ಕನ್ನಡಿಗರು ಭಾಗವಹಿಸಿದ್ದು, ಅಮೆರಿಕದಲ್ಲೆಡೆಯಿಂದ ಬಂದ ಕನ್ನಡ ಕೂಟಗಳ ಸದಸ್ಯರು ತಮ್ಮ ಸದಸ್ಯರೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡರು. ವಿಭಿನ್ನ ವೇಷ ಭೂಷಣಗಳನ್ನು ತೊಟ್ಟು, ಜೈಕಾರ ಹಾಕುತ್ತ, ಕನ್ನಡ ನಾಡಿನ ವೈವಿಧ್ಯತೆಯನ್ನು ಪ್ರತಿಬಿಂಬಿಸಿದರು.

ನಂತರ ಮುಖ್ಯ ಮಂಟಪದಲ್ಲಿ ಮುಂದುವರಿದ ಸಮ್ಮೇಳನದ ಮುಖ್ಯ ಅತಿಥಿಯಾಗಿ ಬಂದಿದ್ದ ಭಾರತದ ರಾಯಭಾರಿ ನಿರುಪಮಾ ರಾವ್ ಅವರು, ''ಭಾರತ ಅಮೆರಿಕದ ಮಧ್ಯೆ ವಿಶೇಷವಾದ ಬಾಂಧವ್ಯವಿದೆ. ಈ ಬಾಂಧವ್ಯ ಗಟ್ಟಿಯಾಗಲು ಅನಿವಾಸಿ ಭಾರತೀಯರು ಮಹತ್ವದ ಪಾತ್ರ ವಹಿಸಬೇಕಾಗುತ್ತದೆ. ಸಿಖ್ ಪೂಜಾಸ್ಥಳದಲ್ಲಿ ನಡೆದ ಘಟನೆ ನಮಗೆಲ್ಲ ಒಂದು ಸೂಚನೆಯಿದ್ದಂತೆ,''ಎಂದರು.

''ವಿಜ್ಞಾನ, ತಂತ್ರಜ್ಞಾನ, ಇಂಧನ, ಆರೋಗ್ಯ, ಕೃಷಿ- ಹೀಗೆ ಹಲವಾರು ರಂಗಗಳಲ್ಲಿ ಅಮೆರಿಕದೊಡನೆ ನಾವು ಕೈಗೂಡಿಸುತ್ತಿದ್ದೇವೆ. ಈ ಒಡನಾಟ ನಿಮ್ಮೆಲ್ಲರ ಸಹಭಾಗಿತ್ವವಿಲ್ಲದೆ ಸಾಧ್ಯವಿಲ್ಲ,'' ಎಂದರು.

''ನಾನು ಕರ್ನಾಟಕದ ಸೊಸೆ,''ಎಂದು ಹೆಮ್ಮೆಯಿಂದ ಹೇಳಿಕೊಂಡ ನಿರುಪಮಾ ರಾವ್ ಅವರು, ಬೆಂಗಳೂರಿನಲ್ಲಿ ತಾವು ಬೆಳೆದ ದಿನಗಳನ್ನು ಮೆಲಕು ಹಾಕಿದರು. ''22ನೇ ವಯಸ್ಸಿನಿಂದ ರಾಜತಾಂತ್ರಿಕ ಕೆಲಸದಲ್ಲಿ ತೊಡಗಿದ್ದೇನೆ. ಕರ್ನಾಟಕದ ನನ್ನ ದಿನಗಳು ನನ್ನ ಮೇಲೆ, ನನ್ನ ಬೆಳವಣಿಗೆಯ ಮೇಲೆ ಬಹಳಷ್ಟು ಪರಿಣಾಮ ಬೀರಿದೆ,'' ಎಂದರು.




**ಸಮ್ಮೇಳನದಲ್ಲಿ ಇನ್ಫೋಸಿಸ್ ಫೌಂಡೇಶನ್‌ನ ಸುಧಾ ಮೂರ್ತಿ, ಭಾರತದ ರಾಯಭಾರಿ ನಿರುಪಮಾ ರಾವ್ ಮಾತನಾಡಿದರು.**

''ಅಮೆರಿಕದಲ್ಲಿ ಭಾರತದ ಸಾರ್ವಜನಿಕ ಕಲ್ಪನೆ ಕಳೆದ 2-3 ದಶಕಗಳಲ್ಲಿ ಸಾಕಷ್ಟು ಬದಲಾಗಿದೆ. ಹೆಜ್ಜೆ ಹೆಜ್ಜೆಯಲ್ಲೂ ಇದನ್ನು ಕಾಣಬಹುದು,'' ಎಂದು ಸ್ವಂತ ಅನುಭವವನ್ನು ಹಂಚಿಕೊಂಡ ಇನ್ನೊಬ್ಬ ಅತಿಥಿ ಇನ್ಫೋಸಿಸ್ ಫೌಂಡೇಶನ್‌ನ ಸುಧಾ ಮೂರ್ತಿಯವರು. ಈ ಬದಲಾವಣೆಯಲ್ಲಿ ಅನಿವಾಸಿಯರ ಪಾತ್ರ ಬಹಳ ಮಹತ್ವದ್ದು ಎಂದರು. ''ನೀವೆಲ್ಲ ಬಹಳ ಸಾಧನೆ ಮಾಡಿ ಉನ್ನತಮಟ್ಟ ಏರಿದ್ದೀರಿ. ನಿಮಗೆ ನಾನು ಬುದ್ಧಿ ಹೇಳಲಾರೆ. ಆದರೆ ಒಬ್ಬ ಕನ್ನಡತಿಯಾಗಿ ನಾನು ಸಲಿಗೆಯಿಂದ ಒಂದು ವಿಚಾರ ಕೇಳಿಕೊಳ್ಳುತ್ತೇನೆ. ಅಸಹಾಯಕರ ಕಡೆ ನಿಮ್ಮ ಕಳಕಳಿ, ಕಾಳಜಿ ಇನ್ನೂ ಹೆಚ್ಚಿಸಿ,'' ಎಂದು ನೆರೆದಿದ್ದವರಲ್ಲಿ ಮನವಿ ಮಾಡಿಕೊಂಡರು.

ಅಕ್ಕದ ಪ್ರಮುಖರು ಅಕ್ಕ ಕೈಗೊಂಡಿರುವ ಅನೇಕ ಅಭ್ಯುದಯದ ಯೋಜನೆಗಳನ್ನು ವಿವರಿಸಿದರು. ಶಿಕಾಗೋದಿಂದ ಬಂದಿದ್ದ ವಿದ್ಯಾರಣ್ಯ ಕನ್ನಡ ಸಂಘದ ಹಾಗೂ ಅಕ್ಕದ ಟ್ರಸ್ಟಿ ಮೋಕ್ಷಗುಂಡಂ ಜಯರಾಮ್ ಅವರು, ''ಹಲವಾರು ವರ್ಷಗಳಿಂದ ನಾವು ಅಕ್ಕದ ಮೂಲಕ ಕರ್ನಾಟಕದ ಅಭ್ಯುದಯದ ಕಡೆ ಗಮನ ಹರಿಸುತ್ತ ಬಂದಿದ್ದೇವೆ''. ಎಂದರು.

ಸಣ್ಣ ಪುಟ್ಟ ವ್ಯತ್ಯಾಸಗಳ ನಡುವೆ ವಿದ್ಯಾಭೂಷಣರ ಸಂಗೀತಕ್ಕೆ ತಲೆದೂಗುತ್ತ, ರಘು ದೀಕ್ಷಿತ್ ಮೋಡಿಗೆ ಕುಣಿಯುತ್ತ, ಒಬ್ಬಟ್ಟು, ಮೈಸೂರ್ ಪಾಕ್ ಸವಿಯುತ್ತಿರುವ ಇಲ್ಲಿ ನೆರೆದಿರುವವರೆಲ್ಲರು ಕನ್ನಡತನದಲ್ಲಿ ಮೈ ಮರೆತಿರುವುದಂತೂ ಖಂಡಿತ.